# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : M/s SML Electricals India Private Limitedಕಂಪನಿಯವರಿಗೆಗದಗ ಜಿಲ್ಲೆಯ, ಗದಗ ತಾಲ್ಲೂಕಿನ ಮುಷ್ಠಿಕೊಪ್ಪ ಗ್ರಾಮದ ಆಸುಪಾಸಿನಲ್ಲಿ ಹಂಚಿಕೆಯಾಗಿರುವ 10 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s Ayana Renewable Power Six Private Limited ರವರಿಗೆ ವರ್ಗಾಯಿಸಿ, ಸದರಿ ಸಾಮರ್ಥ್ಯವನ್ನು 300 ಮೆ.ವ್ಯಾ ಸಾಮರ್ಥ್ಯಕ್ಕೆ ಹೆಚ್ಚಿಸುವ ಕುರಿತು.

**ಓದಲಾಗಿದೆ** :
1) ಸರ್ಕಾರದ ಆದೇಶ ಸಂಖ್ಯೆ:ಇಎನ್ 33 ಎನ್‌ಸಿಇ 2018,ದಿನಾಂಕ:29.01.2018
2) ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್. ಇ.ಡಿ.ಎಲ್. ಇವರ ಪತ್ರ ಸಂಖ್ಯೆ: KREDL/08/SML-1.25 to 10 MW/ARPSPL-300 MW/Gadag/F-22/ 1872, ದಿನಾಂಕ:14.06.2021
3) ಸರ್ಕಾರದ ಆದೇಶ ಸಂಖ್ಯೆ:ಇಎನ್ 140 ಎನ್‌ಸಿಇ 2021,ದಿನಾಂಕ:04.09.2021

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದನ್ವಯ M/s Ensemble Infrastructure India Private Limited ರವರಿಗೆ ಗದಗ ಜಿಲ್ಲೆಯ, ಗದಗ ತಾಲ್ಲೂಕಿನ ಮುಷ್ಠಿಕೊಪ್ಪ ಗ್ರಾಮದಲ್ಲಿ PPA ವರ್ಗದಡಿಯಲ್ಲಿ ಹಂಚಿಕೆಯಾಗಿ ಅನುಷ್ಠಾನಗೊಳಿಸಿದ್ದ, 1.25ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s SML Electricals India Private Limitedರವರಿಗೆ ವರ್ಗಾಯಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ರವರು ಸರ್ಕಾರಕ್ಕೆ ಸಲ್ಲಿಸಿರುವ ತಮ್ಮ ಪ್ರಸ್ತಾವನೆಯಲ್ಲಿ ಪವನ ವಿದ್ಯುತ್ ಯೋಜನೆಗಳಿಗೆ ಸಂಬಂಧಿಸಿದಂತೆ, ಈ ಮೊದಲು, ಅಭಿವೃದ್ಧಿದಾರರು ಹಂಚಿಕೆ/ತಾತ್ವಿಕ ಅನುಮೋದನೆ ನೀಡುವಂತೆ ಕೋರುವ ಸಂದರ್ಭದಲ್ಲಿ, ಕಡಿಮೆ ಸಾಮರ್ಥ್ಯಕ್ಕೆ ಹೆಚ್ಚಿನ ಪ್ರದೇಶದ ವಿಸ್ತೀರ್ಣವನ್ನು Topo Sheet ನಲ್ಲಿ ಗುರುತು ಮಾಡಿ ಸಲ್ಲಿಸುತ್ತಿದ್ದು, ಅದರಂತೆ ಸದರಿಯವರು ಗುರುತು ಮಾಡಿರುವ ಪ್ರದೇಶದ ವಿಸ್ತೀರ್ಣವನ್ನು ಕೆಆರ್‌ಇಡಿಎಲ್‌ನಲ್ಲಿ ಲಭ್ಯವಿರುವ Master Topo sheet ನಲ್ಲಿ ಕಂಪನಿಯ ಹೆಸರನ್ನು ನಮೂದು ಮಾಡಿ ಸದರಿ ಪ್ರದೇಶವನ್ನು ಆ ಕಂಪನಿಗಳಿಗೆ ಪವನ ವಿದ್ಯುತ್ ಯೋಜನೆಗಳನ್ನು ಅಭಿವೃದ್ಧಿಪಡಿಸಲು ನೀಡಲಾಗುತ್ತಿತ್ತು. ಆದರೆ, ಈ ರೀತಿ Block ಮಾಡಲಾದ ಪ್ರದೇಶದ ವಿಸ್ತೀರ್ಣವು ಹೆಚ್ಚಿದ್ದು, ಸದರಿ ಪ್ರದೇಶದಲ್ಲಿ ಅತ್ಯಂತ ಕಡಿಮೆ ಸಾಮರ್ಥ್ಯವನ್ನು ಅನುಷ್ಠಾನಗೊಳಿಸುತ್ತಿರುವುದರಿಂದ ಲಭ್ಯವಿರುವ ಪವನ ವಿದ್ಯುತ್ ಸಾಮರ್ಥ್ಯವನ್ನು ಪೂರ್ಣವಾಗಿ ಅಭಿವೃದ್ಧಿದಾರರುಗಳು ಉಪಯೋಗಿಸುತ್ತಿಲ್ಲವೆಂದು ಕ್ರೆಡಲ್ ರವರು ತಿಳಿಸುತ್ತಾ ಇದರಿಂದ ಇತರ ಆಸಕ್ತ ಅಭಿವೃದ್ಧಿದಾರರಿಗೆ ಇಂತಹ ಪ್ರದೇಶಗಳಲ್ಲಿ ಪವನ ವಿದ್ಯುತ್ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸಾಧ್ಯವಾಗುತ್ತಿಲ್ಲ. ಸದರಿ ಪ್ರದೇಶಗಳು ಖಾಸಗಿ ಜಮೀನನ್ನು ಒಳಗೊಂಡಿದ್ದು, ಈಗ ಸರ್ಕಾರವು ಭೂಸುಧಾರಣೆ ಕಾಯ್ದೆ 2020 ರನ್ವಯ ಅಭಿವೃದ್ಧಿದಾರರುಗಳು ನೇರವಾಗಿ ಜಮೀನಿನ ಮಾಲೀಕರಿಂದ ಭೂಮಿಯನ್ನು ಖರೀದಿಸಲು ಅವಕಾಶ ಕಲ್ಪಿಸಿರುವುದಾಗಿ ತಿಳಿಸಿರುತ್ತಾರೆ.

ಮೇಲಿನ ವಿವರಣೆಯೊಂದಿಗೆ, M/s SML Electricals India Private Limited ಕಂಪನಿಯವರಿಗೆ ಗದಗ ಜಿಲ್ಲೆಯ, ಗದಗ ತಾಲ್ಲೂಕಿನ ಮುಷ್ಠಿಕೊಪ್ಪ ಗ್ರಾಮದಲ್ಲಿ ಹಂಚಿಕೆಯಾಗಿ ಅನುಷ್ಠಾನಗೊಂಡಿರುವ 1.25 ಮೆ.ವ್ಯಾ. ಸಾಮರ್ಥ್ಯದ ಸ್ಥಳದ ಆಸುಪಾಸಿನಲ್ಲಿ (ಗದಗ ಜಿಲ್ಲೆಯ ಗದಗ ಮತ್ತು ಮುಂಡರಗಿ ತಾಲ್ಲೂಕುಗಳ ವ್ಯಾಪ್ತಿಯಲ್ಲಿ) ಸಾಕಷ್ಟು ಖಾಸಗಿ ಜಮೀನು ಲಭ್ಯವಿದ್ದು ಹಾಗೂ ಸದರಿ ಸ್ಥಳದಲ್ಲಿ ಪವನ ವಿದ್ಯುತ್ ಸಂಭವನೀಯ ಸಾಮರ್ಥ್ಯ ಇರುವುದರಿಂದ ಈಗಿನ ಸಾಮರ್ಥ್ಯಕ್ಕೆ ಹೆಚ್ಚುವರಿಯಾಗಿ (Additional) 10 ಮೆ.ವ್ಯಾ. ಸಾಮರ್ಥ್ಯವನ್ನು ಮೂರನೇ ವ್ಯಕ್ತಿ/SECI ವರ್ಗದಡಿಯಲ್ಲಿ ಹಂಚಿಕೆ ಮಾಡಬೇಕೆಂದು ಅಭಿವೃದ್ಧಿದಾರರು ಕೋರಿರುವುದಾಗಿ, ನಂತರ ಹೆಚ್ಚುವರಿಯಾಗಿ ಹಂಚಿಕೆಯಾದ 10 ಮೆ.ವ್ಯಾ ಸಾಮರ್ಥ್ಯವನ್ನು M/s Ayana Renewable Power Six Private Limited, ರವರಿಗೆ ವರ್ಗಾಯಿಸಿ, ಸದರಿ ಸಾಮರ್ಥ್ಯವನ್ನು 300 ಮೆ.ವ್ಯಾಗೆ ಹೆಚ್ಚಿಸುವುದು ಹಾಗೂ ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್‌ನ್ನು ಕೇಂದ್ರ ಸರ್ಕಾರದ Power Grid Corporation of India Limited (PGCIL) ವಿದ್ಯುತ್ ಪ್ರಸರಣ ಜಾಲಕ್ಕೆ ಜೋಡಿಸಿ, Inter State Transmission System (ISTS) ಮುಖಾಂತರ ಹೊರ ರಾಜ್ಯಗಳಿಗೆ SECI

ಬಿಡ್ಡಿಂಗ್/ಮೂರನೇ ವ್ಯಕ್ತಿಗೆ ವಿದ್ಯುತ್ ಸರಬರಾಜು ಮಾಡಲು ಆದೇಶ ನೀಡುವಂತೆ M/s Ayana Renewable Power Six Private Limited ರವರು Topo Sheet No.48 M/11 and 48 M/15 ರಲ್ಲಿ, ಈಗಾಗಲೇ ಸರ್ಕಾರದಿಂದ ಹಂಚಿಕೆ ಆದೇಶ/ತಾತ್ವಿಕ ಅನುಮೋದನೆಯನ್ನು ಪಡೆದಿರುವ ಹಾಗೂ ಪಡೆಯಬೇಕಾಗಿರುವ ಪವನ ವಿದ್ಯುತ್ ಯೋಜನೆಗಳ ಸಾಮರ್ಥ್ಯಕ್ಕೆ ಅಳವಡಿಸುವ ಟರ್ಬೈನ್‌ಗಳಿಗೆ ಯಾವುದೇ ತೊಂದರೆಯಾಗದಂತೆ, ಪ್ರತಿ WTG ಯನ್ನು 4 ಎಕರೆಯಂತೆ ಲೆಕ್ಕೀಕರಿಸಿ ಒಟ್ಟು 300 ಮೆ.ವ್ಯಾ ಸಾಮರ್ಥ್ಯಕ್ಕೆ 524 ಎಕರೆ ಖಾಸಗಿ ಜಮೀನಿನಲ್ಲಿ ಅನುಷ್ಠಾನಗೊಳಿಸಲು ಹಾಗೂ ಪವನ ವಿದ್ಯುತ್ ಘಟಕಗಳ ಅಂತರವನ್ನು MNRE ಸುತ್ತೋಲೆ/ಮಾರ್ಗಸೂಚಿಯಂತೆ ಅಳವಡಿಸುವಂತೆ ಷರತ್ತುಗಳನ್ನು ವಿಧಿಸಿ ಮಂಜೂರು ಮಾಡಬಹುದಾಗಿದೆ ಎಂಬ ಅಭಿಪ್ರಾಯದೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲಿನ ಪ್ರಸ್ತಾವನೆಯನ್ನು ಪರಿಶೀಲಿಸಿ, ಮೇಲೆ ಓದಲಾದ ಕ್ರಮ ಸಂಖ್ಯೆ(3)ರ ಆದೇಶದನ್ವಯ M/s SML Electricals India Private Limited ಕಂಪನಿಯವರಿಗೆ ಗದಗ ಜಿಲ್ಲೆಯ, ಗದಗ ತಾಲ್ಲೂಕಿನ ಮುಷ್ಕಿಕೊಪ್ಪ ಗ್ರಾಮದಲ್ಲಿ ಅನುಷ್ಠಾನಗೊಳಿಸಿರುವ 1.25 ಮೆ.ವ್ಯಾ ಸಾಮರ್ಥ್ಯದ ಜೊತೆಗೆ ಹೆಚ್ಚುವರಿಯಾಗಿ 10 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಿ ಆದೇಶಿಸಲಾಗಿರುತ್ತದೆ. ಮುಂದುವರೆದು ವರ್ಗಾವಣೆ ಮತ್ತು ಸಾಮರ್ಥ್ಯ ಹೆಚ್ಚಳಕ್ಕೆ ಸಂಬಂಧಿಸಿದಂತೆ ಸರ್ಕಾರದ ಈ ಕೆಳಕಂಡ ಆದೇಶ.

## ಸರ್ಕಾರದ ಆದೇಶ ಸಂಖ್ಯೆ:ಎನರ್ಜಿ140 ಎನ್‌ಸಿಇ 2021(ಭಾಗ-1)
## ಬೆಂಗಳೂರು ದಿನಾಂಕ:04.09.2021

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, M/s SML Electricals India Private Limited ಕಂಪನಿಯವರಿಗೆ ಗದಗ ಜಿಲ್ಲೆಯ, ಗದಗ ತಾಲ್ಲೂಕಿನ ಮುಷ್ಕಿಕೊಪ್ಪ ಗ್ರಾಮದ ಆಸುಪಾಸಿನಲ್ಲಿ (ಗದಗ ಜಿಲ್ಲೆಯ ಗದಗ ಮತ್ತು ಮುಂಡರಗಿ ತಾಲ್ಲೂಕುಗಳ ವ್ಯಾಪ್ತಿಯಲ್ಲಿ) ಲಭ್ಯವಿರುವ ಖಾಸಗಿ ಜಮೀನಿನ ಸ್ಥಳದಲ್ಲಿ ಹಂಚಿಕೆಯಾಗಿರುವ 10 ಮೆ.ವ್ಯಾಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s Ayana Renewable Power Six Private Limited ಕಂಪನಿಯವರಿಗೆ ವರ್ಗಾಯಿಸಿ, ಸದರಿ ಸಾಮರ್ಥ್ಯವನ್ನು 300 ಮೆ.ವ್ಯಾಗೆ ಹೆಚ್ಚಿಸಿ ಈ ಕೆಳಕಂಡ ಶೆಡ್ಯೂಲ್ ಹಾಗೂ ಷರತ್ತಿಗೊಳಪಟ್ಟು ಆದೇಶಿಸಿದೆ.

**Geographical area description for 300 MW capacity wind power project of M/sAyana Renewable Power Six Private Limited**

<table>
<tr><th>Sl. No</th><th>Geographical area description of the project</th><th>Nearby Villages of the proposed area & District</th><th>Existing (Transfer) Capacity in MW</th><th>Capacity on enhance ment in MW</th><th>Total capacity in MW</th></tr>
<tr><td>1</td><td>The identified area is covered in Private land and are held in the following Geographical co-ordinates as:<br><br>Toposheet No: 48M/11 & 48 M/15<br><br>Tentative WTG Co-ordinates for 300MW with 131 Nos. of WTG Locations
<table>
<tr><th>WTG No</th><th>Longitude</th><th>Latitude</th></tr>
<tr><td>1</td><td>75°47'12.89"</td><td>15°25'31.50"</td></tr>
<tr><td>2</td><td>75°47'14.76"</td><td>15°25'45.29"</td></tr>
<tr><td>3</td><td>75°47'10.76"</td><td>15°26'10.53"</td></tr>
</table></td><td>Lakkundi, Harlapura, Kanaginahala, Hathalageri, Kadampura, Churchihala, Dambala, Jantli and Shirur of Gadag & Mundargi Taluks, Gadag District.</td><td>10MW</td><td>290MW</td><td>300MW (130 Nos x 2300KW + 1No x1000 KW)</td></tr>
</table>